# ಹೊಯ್ಸಳರ ಅಮೂಲ್ಯ ಕೊಡುಗೆ

## ಪಂಚಲಿಂಗೇಶ್ವರ ದೇವಾಲಯ

**ಅಮೋಘ ವಾಸ್ತುಶಿಲ್ಪದ, ರಾಷ್ಟ್ರೀಯ ಸ್ಮಾರಕವಾಗಿರುವ, ಹೊಯ್ಸಳರ ಕಾಲದ ಈ ದೇಗುಲ ಎಲೆಮರೆಕಾಯಿಯಂತೆ ಉಳಿದಿದೆ.**

■ ಧಾರಿಣಿ ಮಾಯಾ

ಚಿತ್ರಗಳು: ಡಾ. ಕೆ.ಹೆಚ್. ಶ್ರೀನಿವಾಸ್

ಸುಂದರ ವಾಸ್ತುಶಿಲ್ಪವುಳ್ಳ ತಾಣಗಳನ್ನು ನೋಡಲು ನಾವು ಬೇರೆ ರಾಜ್ಯ ಹಾಗೂ ವಿದೇಶಕ್ಕೆ ಹೋಗುತ್ತೇವೆ. ಆದರೆ ನಮ್ಮ ಕರ್ನಾಟಕದ ಒಂದು ಸಣ್ಣ ಹಳ್ಳಿಯಲ್ಲಿರುವ ಹೊಯ್ಸಳ ಕಾಲದ ಅಮೋಘ ವಾಸ್ತುಶಿಲ್ಪದ ದೇವಾಲಯವೊಂದು ಪ್ರವಾಸೀ ನಕ್ಷೆಯಲ್ಲಿ ಕಾಣೆಯಾಗಿರುವುದು ನಿಜಕ್ಕೂ ಖೇದಕರ.

ಈಚೆಗೆ ಚನ್ನರಾಯಪಟ್ಟಣಕ್ಕೆ ಹೋದ ಸಂದರ್ಭ. ಕಿಕ್ಕೇರಿಯ ಹತ್ತಿರದ ಈ ದೇವಸ್ಥಾನವನ್ನು ತಲುಪಿದಾಗ ಮಧ್ಯಾಹ್ನ 3 ಗಂಟೆ. ಸುಡುಸುಡುವ ಸೂರ್ಯನ ಪ್ರಖರತೆಯನ್ನೂ ಮರೆಸುವಂಥ ಪಂಚಲಿಂಗೇಶ್ವರ ದೇವಾಲಯದ ಅಮೋಘ ವಾಸ್ತುಶಿಲ್ಪ ಹೊರಗಿನಿಂದಲೇ ಆಕರ್ಷಿಸಿತು.

900 ವರ್ಷಗಳ ಹಿಂದಿನ ಪುರಾತನವಾದ, ಹೊಯ್ಸಳರ ಕಾಲದ ಪಂಚಲಿಂಗೇಶ್ವರ ದೇವಾಲಯವು, ಪಂಚಲಿಂಗಗಳು ಒಂದೇ ಸ್ಥಳದಲ್ಲಿ ನೋಡಲು ಸಿಗುವ ಅಪೂರ್ವ ಕ್ಷೇತ್ರ. ಮಂಡ್ಯ ಜಿಲ್ಲೆಯ ಕಿಕ್ಕೇರಿಯಿಂದ ಪಶ್ಚಿಮ ದಿಕ್ಕಿಗೆ 4.9 ಕಿ.ಮೀ. ದೂರದ ಗಂಗವಾಡಿ ಪ್ರಾಂತ್ಯದ ಗೋವಿಂದನ ಹಳ್ಳಿಯಲ್ಲಿದೆ. ಗೋವಿಂದರಾಜನೆಂಬ ಪಾಳೇಗಾರನ ಹೆಸರಿನ ಮೇಲೆ ಈ ಸ್ಥಳವನ್ನು ಗೋವಿಂದನಹಳ್ಳಿ ಎಂದು ಹೆಸರಿಸಲಾಗಿದೆ. ಈ ದೇವಾಲಯದಲ್ಲಿ ಐದು ಗರ್ಭಗುಡಿಗಳಿದ್ದು, ಎಲ್ಲವೂ ದಕ್ಷಿಣೋತ್ತರವಾಗಿ ಒಂದೇ ಸಾಲಿನಲ್ಲಿ ಪೂರ್ವಕ್ಕೆ ಮುಖ ಮಾಡಿವೆ. ಈ ದೇವಾಲಯದ ದ್ವಾರಪಾಲಕರು ಹಾಗೂ ಇನ್ನಿತರ ಶಿಲ್ಪಗಳನ್ನು ಕೆತ್ತಿದ ರೂವಾರಿ ಮಲ್ಲಿತಮ್ಮನ ಹೆಸರು ನವರಂಗದ ದ್ವಾರಪಾಲಕ ಪೀಠದ ಮೇಲಿದೆ. ಈ ದೇವಾಲಯ ಕ್ರಿ.ಶ. ಸುಮಾರು 1237–38 ರಲ್ಲಿ ನಿರ್ಮಿತವಾಗಿರಬಹುದೆಂದು ಹೇಳಲಾಗಿದೆ.



ಹೊಯ್ಸಳ ವಾಸ್ತುಶೈಲಿಯ ಐದು ಗರ್ಭಗುಡಿಗಳ ಕರ್ನಾಟಕದಲ್ಲೇ ಏಕೈಕ ದೇವಾಲಯ ಎಂಬ ಹೆಗ್ಗಳಿಕೆ ಇದ್ದರೂ, ಸರಿಯಾದ ಪ್ರಚಾರವಿಲ್ಲದೆ ಗುಪ್ತವಾಗೇ ಉಳಿದಿದೆ. ಮೂಲತಃ ಈ ಗುಡಿ ಚತುಷ್ಕೂಟವಾಗಿದ್ದು, ಅನತಿ ಕಾಲದಲ್ಲೇ ಮತ್ತೊಂದು ಗುಡಿಯನ್ನು ಸೇರಿಸಿ ಪಂಚಕೂಟವನ್ನಾಗಿ ಪರಿವರ್ತಿಸಲಾಯಿತು. ದೇವಾಲಯದ ಹೊರಾಂಗಣದಲ್ಲಿ ವಿಷ್ಣು ಭಾಗ ಹಾಗೂ ಒಳಾಂಗಣದಲ್ಲಿ ಶಿವ ಭಾಗವಿದೆ. ಹೊರಾವರಣದಲ್ಲಿ ಭಾಗವತ, ಮಹಾಭಾರತ, ರಾಮ, ಕೃಷ್ಣ, ಸಾಲು ಆನೆಗಳು, ದಶಾವತಾರದ ಕೆತ್ತನೆ ನೋಡಬಹುದು. ಒಳಾವರಣದ ಎರಡನೆಯ ಮತ್ತು ಮೂರನೆಯ ಗರ್ಭಗುಡಿಗಳಿಗೆ ಎದುರಾಗಿ ಮಾತ್ರ ದ್ವಾರ, ದ್ವಾರಮಂಟಪ ಮತ್ತು ನಂದಿ ಶಿಲ್ಪಗಳಿವೆ. ಕಲ್ಲಿನಲ್ಲಿ ಸಣ್ಣ ಕುಸುರಿಯಿಂದ ಕೆತ್ತಲಾದ ಕಾಲ್ಗೆಜ್ಜೆ, ತಲೆಯ ಹಾಗೂ ಕೊರಳ ಆಭರಣಗಳಿಂದ ಕೂಡಿದ ಸುಮಾರು ಮೂರೂವರೆ ಅಡಿ ಎತ್ತರದ ಕಲ್ಲಿನ ಪೀಠದ ಮೇಲೆ ಕುಳಿತ ಭಂಗಿಯ ದ್ವಾರಮಂಟಪದ ನಂದಿಯ ಮೋಹಕ ಸೌಂದರ್ಯ ಕಣ್ತುಂಬುತ್ತದೆ.

